ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂ:ಉಕೃನಿ(ಕೃಯಾಂ&ಸೂನೀ)/LAQ-1903/2024-25

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ:18.07.2024

ರವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು - 01.

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ. ತಮ್ಮಯ್ಯ ಹೆಚ್.ಡಿ. (ಚಿಕ್ಕಮಗಳೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-1903 ಕ್ಕೆ ಉತ್ತರಿಸುವ ಕುರಿತು.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ. ತಮ್ಮಯ್ಯ ಹೆಚ್.ಡಿ. (ಚಿಕ್ಕಮಗಳೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-1903 ಕ್ಕೆ ಕೇಳಿರುವ ಮಾಹಿತಿಯನ್ನು ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಕೃಷಿ ನಿರ್ದೇಶಕರು

ಕರ್ನಾಟಕ ವಿಧಾನಸಭೆ

ಪ್ರಶ್ನೆ ಸಂಖ್ಯೆ	ಎಲ್.ಎ.ಕ್ಯೂ. 1903
ಸದಸ್ಯರ ಹೆಸರು	ಶ್ರೀ/ಶ್ರೀಮತಿ. ತಮ್ಮಯ್ಯ ಹೆಚ್ ಡಿ (ಚಿಕ್ಕಮಗಳೂರು)
ಉತ್ತರಿಸಬೇಕಾದ ದಿನಾಂಕ	24/07/2024.
ಉತ್ತರಿಸುವ ಸಚಿವರು	ಮಾನ್ಯ ಕೃಷಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ರೈತರಿಗೆ ಯಾವ ಯಾವ ಯೋಜನೆಗಳಡಿ ತುಂತುರು ಹಾಗೂ ಹನಿ ನೀರಾವರಿ ವ್ಯವಸ್ಥೆ ಮಾಡಿಕೊಡಲಾಗುತ್ತಿದೆ; ತುಂತುರು ಹಾಗೂ ಹನಿ ನೀರಾವರಿಗಾಗಿ ರೈತರಿಗೆ ನಿಗದಿಪಡಿಸಿರುವ ಘಟಕ ವೆಚ್ಚವೆಷ್ಟು; ಈ ಯೋಜನೆಯಡಿ ಒಮ್ಮೆ ಅನುದಾನ ಪಡೆದ ರೈತರಿಗೆ ಎಷ್ಟು ವರ್ಷಗಳ ನಂತರ ಮತ್ತೆ ಯೋಜನೆ ಫಲಾನುಭವಿಯಾಗಿ ಆಯ್ಕೆ ಮಾಡಲಾಗುತ್ತದೆ;	ರಾಜ್ಯದಲ್ಲಿ ರೈತರಿಗೆ ಕೃಷಿ ಇಲಾಖೆ ವತಿಯಿಂದ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ, ಕೇಂದ್ರ ವಲಯ ಅಟಲ್ ಭೂಜಲ್ ಯೋಜನೆಯಡಿ, ಕೇಂದ್ರ ಪುರಸ್ಕೃತ ಆಹಾರ ಭದ್ರತಾ ಅಭಿಯಾನ ಮತ್ತು ರಾಜ್ಯ ವಲಯ ಕೃಷಿ ಭಾಗ್ಯ ಯೋಜನೆಯಡಿ ತುಂತುರು ಹಾಗೂ ಹನಿ ನೀರಾವರಿ ವ್ಯವಸ್ಥೆ ಮಾಡಿಕೊಡಲಾಗುತ್ತಿದೆ. **ತುಂತುರು ನೀರಾವರಿಗಾಗಿ ರೈತರಿಗೆ ನಿಗದಿಪಡಿಸಿರುವ ಘಟಕ ವೆಚ್ಚದ ವಿವರ ಈ ಕೆಳಗಿನಂತಿದೆ.**

(ಆರ್ಥಿಕ: ರೂ.ಗಳಲ್ಲಿ)

ವಿಸ್ತೀರ್ಣ	ಪೈಪ್ ಅಗಲ (ಮಿ.ಮಿ)		
	63 mm	75 mm	90 mm
0.4 ಹೆಕ್ಟೇರ್ ವರೆಗೆ	14386	-	-
1.0 ಹೆಕ್ಟೇರ್ ವರೆಗೆ	23568	26442	-
2.0 ಹೆಕ್ಟೇರ್ ವರೆಗೆ	33822	37732	-
3.0 ಹೆಕ್ಟೇರ್ ವರೆಗೆ	-	-	51046
4.0 ಹೆಕ್ಟೇರ್ ವರೆಗೆ	-	-	64391
5.0 ಹೆಕ್ಟೇರ್ ವರೆಗೆ	-	-	72928

ಮುಂದುವರೆದು, ಹನಿ ನೀರಾವರಿ ಘಟಕಗಳಿಗೆ ಸಂಬಂಧಿಸಿದಂತೆ, ಕ್ಷೇತ್ರ ಮಟ್ಟದಲ್ಲಿ ರೈತರು ಅಳವಡಿಸಿಕೊಳ್ಳುವ ವಿಸ್ತೀರ್ಣ ಮತ್ತು ಅಂತರಕ್ಕೆ ಅನುಗುಣವಾಗಿ Actual Bill of Quantities ಆಧಾರದ ಮೇಲೆ ಹಾಗೂ ಕೇಂದ್ರ ಸರ್ಕಾರವು ನೀಡಿರುವ ಸೂಚ್ಯಂಕ ದರದ ಆಧಾರದ ಮೇಲೆ ಗರಿಷ್ಠ ಸಹಾಯಧನವನ್ನು ನಿಗದಿಪಡಿಸಲಾಗಿರುತ್ತದೆ. ಅದರಂತೆ, ಹನಿ ನೀರಾವರಿ ಪದ್ಧತಿಯ ವಿವಿಧ ಅಂತರಗಳಿಗೆ ಚಾಲ್ತಿಯಲ್ಲಿರುವ ಕೇಂದ್ರ ಸರ್ಕಾರದ ಸೂಚ್ಯಂಕ ದರದ ವಿವರ ಈ ಕೆಳಗಿನಂತಿದೆ.

<table>
<tr>
<td></td>
<td></td>
<td>

(ಆರ್ಥಿಕ: ರೂ.ಗಳಲ್ಲಿ)

<table>
<tr><td>ವಿಸ್ತೀರ್ಣ</td><td colspan="4">ಅಂತರಗಳು</td></tr>
<tr><td></td><td>2.5m X 0.6m</td><td>1.8m X 0.6m</td><td>1.5m X 0.6m</td><td>1.2m X 0.6m</td></tr>
<tr><td>0.2 ಹೆಕ್ಟೇರ್ ವರೆಗೆ</td><td>20201</td><td>24569</td><td>28003</td><td>31436</td></tr>
<tr><td>0.4 ಹೆಕ್ಟೇರ್ ವರೆಗೆ</td><td>35000</td><td>42992</td><td>50116</td><td>57241</td></tr>
<tr><td>1.0 ಹೆಕ್ಟೇರ್ ವರೆಗೆ</td><td>71733</td><td>91560</td><td>109531</td><td>127501</td></tr>
<tr><td>2.0 ಹೆಕ್ಟೇರ್ ವರೆಗೆ</td><td>131824</td><td>173298</td><td>207860</td><td>242422</td></tr>
<tr><td>3.0 ಹೆಕ್ಟೇರ್ ವರೆಗೆ</td><td>201464</td><td>260868</td><td>313909</td><td>366950</td></tr>
<tr><td>4.0 ಹೆಕ್ಟೇರ್ ವರೆಗೆ</td><td>279770</td><td>355323</td><td>425189</td><td>495055</td></tr>
<tr><td>5.0 ಹೆಕ್ಟೇರ್ ವರೆಗೆ</td><td>343433</td><td>442484</td><td>530905</td><td>619326</td></tr>
</table>

ಸದರಿ ಯೋಜನೆಯನ್ನು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ (PMKSY) ಪ್ರತಿ ಹನಿಗೆ ಅಧಿಕ ಬೆಳೆ (PDMC) ಘಟಕದ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸುತ್ತಿದ್ದು, ಅದರನ್ವಯ ಒಮ್ಮೆ ಸೂಕ್ಷ್ಮ ನೀರಾವರಿ ಘಟಕಗಳನ್ನು (ತುಂತುರು/ಹನಿ) ಸಹಾಯಧನದಡಿ ಪಡೆದ ರೈತರು ಮತ್ತೆ 7 ವರ್ಷಗಳ ನಂತರ ಸದರಿ ಘಟಕಗಳನ್ನು ಸಹಾಯಧನದಡಿ ಪಡೆಯಲು ಅರ್ಹರಿರುತ್ತಾರೆ. ಅದರಂತೆ, ಪ.ಜಾ./ಪ.ಪಂ. ವರ್ಗದ ರೈತರಿಗೆ ಪ್ರತಿ ಏಳು (7) ವರ್ಷಕ್ಕೊಮ್ಮೆ ಸೂಕ್ಷ್ಮ ನೀರಾವರಿ (ತುಂತುರು/ಹನಿ) ಘಟಕಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ, ಸಾಮಾನ್ಯ ವರ್ಗದಡಿ ಕ್ಷೇತ್ರ ಮಟ್ಟದಲ್ಲಿ ಒಮ್ಮೆಯೂ ಸೂಕ್ಷ್ಮ ನೀರಾವರಿ ಘಟಕಗಳನ್ನು ಪಡೆಯದ ರೈತರ ಸಂಖ್ಯೆ ಹೆಚ್ಚಾಗಿರುವುದರಿಂದ, ಎಲ್ಲಾ ರೈತರಿಗೂ ಒಮ್ಮೆಯಾದರೂ ಸೂಕ್ಷ್ಮ ನೀರಾವರಿ ಘಟಕಗಳನ್ನು (ತುಂತುರು/ಹನಿ) ನೀಡುವ ಸಲುವಾಗಿ ಸಾಮಾನ್ಯ ವರ್ಗದ ರೈತರಿಗೆ ಜೀವನಾವಧಿಯಲ್ಲಿ ಒಮ್ಮೆ ಮಾತ್ರ ಸೂಕ್ಷ್ಮ ನೀರಾವರಿ ಘಟಕಗಳನ್ನು (ತುಂತುರು/ಹನಿ) ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.

</td>
</tr>
<tr>
<td>ಆ)</td>
<td>ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಿ.ಎಂ. ಕಿಸಾನ್ ಸಮ್ಮಾನ್ ಯೋಜನೆಯಡಿ ಕಳೆದ 3</td>
<td>ಚಿಕ್ಕಮಗಳೂರು ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಪಿ.ಎಂ.ಕಿಸಾನ್ ಯೋಜನೆಯಡಿ 25027 ರೈತರು ಅರ್ಜಿಗಳನ್ನು ಸಲ್ಲಿಸಿದ್ದು, ಮಾರ್ಗಸೂಚಿಯನ್ವಯ ಸ್ವಯಂ ಘೋಷಣೆ ಆಧಾರದಲ್ಲಿ ಪರಿಶೀಲನೆಯಾಗಿ ಒಟ್ಟು 23800 ಅರ್ಜಿಗಳನ್ನು ಯೋಜನೆಗೆ ರಾಜ್ಯದಿಂದ ನೊಂದಾಯಿಸಲಾಗಿರುತ್ತದೆ.</td>
</tr>
</table>

	ವರ್ಷಗಳಲ್ಲಿ ಎಷ್ಟು ರೈತರಿಗೆ ಹಣ ಪಾವತಿಯಾಗಿದೆ; ಎಷ್ಟು ರೈತರಿಗೆ ಹಣ ಪಾವತಿ ಮಾಡಲು ಸಾಧ್ಯವಾಗಿಲ್ಲ; ಕಾರಣವೇನು? (ವಿವರ ನೀಡುವುದು)	ಇಲ್ಲಿಯವರೆಗೆ 21897 ರೈತರಿಗೆ ಯೋಜನೆಯಡಿ ಆರ್ಥಿಕ ನೆರವು ವರ್ಗಾವಣೆಯಾಗಿರುತ್ತದೆ. ನೊಂದಣಿಯ ನಂತರ ಹಂತ ಹಂತವಾಗಿ 2674 ರೈತರ ಅರ್ಜಿಗಳು ಪಾವತಿಗೆ ಅನರ್ಹರಾಗಿರುತ್ತಾರೆ ಮಾರ್ಗಸೂಚಿಯನ್ವಯ ಅನರ್ಹ (ಪಿಂಚಣಿದಾರರು, ಆದಾಯ ತೆರಿಗೆ ಪಾವತಿದಾರರು, ಭೂಮಿ ಮಾರಾಟ ಇತ್ಯಾದಿ) ಮತ್ತು ಮರಣ ಹೊಂದಿರುವ ರೈತರು, ಹಾಗೂ ನಿಗದಿತ ಮರುಪರಿಶೀಲನೆಗಾಗಿ 1492 ರೈತರ ಅರ್ಜಿಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿರುತ್ತದೆ (ಭೂಮಾಲೀಕತ್ವದ ಪರಿಶೀಲನೆ).

ಕೃಷಿ ನಿರ್ದೇಶಕರು